ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 19-12-1978.

# *ಸತ್ಯತೆಯೇ(ರಿಯಾಲಿಟಿ) ಎಲ್ಲದಕ್ಕಿಂತ ದೊಡ್ಡ ರಾಯಲ್ಟಿಯಾಗಿದೆ*

(रीयल्टी ही सबसे बड़ी रॉयल्टी है)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ಶಾಂತ ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ

**ಸರ್ವರ ಅದೃಷ್ಟವನ್ನು ತಯಾರು ಮಾಡುವವರು ಭಾಗ್ಯವಿಧಾತ ಶಿವತಂದೆ ತನ್ನ ಬುದ್ಧಿವಂತ, ಅದೃಷ್ಟವಂತ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಬಾಪ್‌ದಾದಾ ಮಕ್ಕಳನ್ನು ನೋಡಿ ಇದೇ ಮಕ್ಕಳು ಮುಂದೆ ಸರ್ವಶ್ರೇಷ್ಠ ಭಾಗ್ಯವಂತರಾಗುವವರು ಎಂದು ಸಂತೋಷ ಪಡುತ್ತಿದ್ದಾರೆ. ಮಕ್ಕಳಲ್ಲಿ ಪ್ರತಿಯೊಬ್ಬರ ವರ್ತಮಾನ ಹಾಗೂ ಭವಿಷ್ಯದ ಅದೃಷ್ಟವನ್ನು ನೋಡುತ್ತಾ ಬಾಪ್‌ದಾದಾ ಪ್ರತಿಯೊಬ್ಬರ ಭಾವಚಿತ್ರದಲ್ಲಿ ಅದೃಷ್ಟವನ್ನು ನೋಡುತ್ತಿದ್ದಾರೆ. ಬ್ರಾಹ್ಮಣರ ವರ್ತಮಾನ ಚೆಹರೆಯಿಂದ ಭವಿಷ್ಯವನ್ನು ನೋಡುತ್ತೇವೆ. ಮಕ್ಕಳಲ್ಲಿ ಪ್ರತಿಯೊಬ್ಬರೂ ಸ್ವರ್ಗಕ್ಕೆ ಅಧಿಕಾರಿ ಆಗಿದ್ದೀರಿ. ಮಕ್ಕಳ ಅಧಿಕಾರವನ್ನು ನೋಡಿ ಇಡೀ ವಿಶ್ವದಲ್ಲಿ ಇಂತಹ ಭಾಗ್ಯವಂತ ಮಕ್ಕಳು ಬೇರೆ ಯಾರಿಗೂ ಇರಲು ಸಾಧ್ಯವಿಲ್ಲವೆಂದು ಬಾಪ್‌ದಾದಾರವರಿಗೂ ಸಹ ಈಶ್ವರೀಯ ನಶೆ ಇದೆ. ನಮ್ಮಂತಹ ಅದೃಷ್ಟವು ಬೇರೆಯಾರಿಗೂ ಇರಲು ಸಾಧ್ಯವಿಲ್ಲ ಎಂದು ಮಕ್ಕಳಿಗೂ ಸಹ ನಶೆಯು ಇದೆಯೇ?

ಇಂದು ಬಾಪ್‌ದಾದಾ ವಿಶೇಷ ರೂಪದಿಂದ ಪ್ರತಿಯೊಬ್ಬ ಮಕ್ಕಳಲ್ಲಿಯೂ ಒಂದು ವಿಶೇಷತೆಯನ್ನು ನೋಡುತ್ತಾ ಇದ್ದಾರೆ. ಅದೇನೆಂದರೆ ಪ್ರತಿಯೊಬ್ಬರಲ್ಲಿಯೂ ಸತ್ಯತೆ(ರಿಯಾಲಿಟಿ)ಯ ಘನತೆ (ರಾಜಸ,ರಾಯಲ್ಟಿ)ಯು ಎಷ್ಟರಮಟ್ಟಿಗೆ ಧಾರಣೆ ಆಗಿದೆ ಎನ್ನುವುದನ್ನು ನೋಡುತ್ತಿದ್ದಾರೆ. ರಾಯಲ್ಟಿ ರಿಯಾಲಿಟಿ ಆಗಿದೆ. ಇದಕ್ಕಿಂತಲೂ ಹೆಚ್ಚಿನ ರಾಯಲ್ಟಿ ಬೇರೆಯಾವುದೂ ಇಲ್ಲ. ರಾಯಲ್ಟಿ ಯಾವ ವಿಷಯಗಳದು ಅಥವಾ ಸತ್ಯತೆ ಯಾವುದರಲ್ಲಿ? ಮೊದಲು ನಿಮ್ಮ ಸ್ವರೂಪದ ಸತ್ಯತೆ ಇರಬೇಕು. ಒಂದು ವೇಳೆ ಸತ್ಯತೆ ಎಂದರೆ ನಿಮ್ಮ ಮೂಲ ಅಥವಾ ನಿಜಸ್ವರೂಪದ ಸ್ಮೃತಿಯು ಸದಾ ಇದ್ದರೆ ಆಗ ಸ್ವರೂಪದ ಸತ್ಯತೆಯಿಂದ ಈ ಸ್ಥೂಲ ಚಹರೆಯಲ್ಲಿಯೂ ಅಲೌಕಿಕ ರಾಯಲ್ಟಿ ಕಾಣಿಸುವುದು. ಯಾರು ನೋಡಿದರೂ ಅವರ ಮುಖದಿಂದ ಇವರು ಈ ಪ್ರಪಂಚದವರಲ್ಲ, ಅಲೌಕಿಕ ಪ್ರಪಂಚದ

ಸೂಕ್ಷ್ಮದೇವತೆ ಆಗಿದ್ದಾರೆ ಅಥವಾ ಸ್ವರ್ಗದ ಯಾವುದೋ ದೇವತೆಯು ಭೂಮಿಗೆ ಇಳಿದು ಬಂದಿದ್ದಾರೆ ಎನ್ನುವ ಮಾತೇ ಅವರ ಬಾಯಿಯಿಂದ ಹೊರ ಬೀಳುವುದು. ಹೀಗೆ ರಾಯಲ್ಟಿ ಅನುಭವ ಆಗುವುದು. ಮತ್ತೊಂದು ಅಂಶವೇನೆಂದರೆ ಸ್ಮೃತಿಯಲ್ಲಿಯೂ ಕೂಡ ಸತ್ಯತೆ ಎಂದರೆ "ಒಬ್ಬ ತಂದೆಯ ಹೊರತು ಬೇರೆಯಾರೂ ಇಲ್ಲ" ಎನ್ನುವ ಸತ್ಯತೆ ಸ್ಮೃತಿಯಿಂದ ಕರ್ಮದಲ್ಲಿ ಅಥವಾ ಮಾತಿನಲ್ಲಿ ರಾಯಲ್ಟಿ ಕಂಡುಬರುವುದು. ಪ್ರತಿಯೊಂದು ಕರ್ಮವೂ ಸತ್ಯ ಎಂದರೆ ಶ್ರೇಷ್ಠ ಆಗುವ ಕಾರಣದಿಂದ ಯಾರೇ ಸಂಪರ್ಕದಲ್ಲಿ ಬಂದರೂ ಅವರಿಗೆ ಪ್ರತಿಯೊಂದು ಕರ್ಮದಲ್ಲಿ ತಂದೆಯ ಸಮಾನ ಚರಿತ್ರೆಯು ಅನುಭವ ಆಗುವುದು. ಪ್ರತಿಯೊಂದು ಮಾತಿನಲ್ಲಿ ತಂದೆಯ ಸಮಾನ ಅಧಿಕಾರ ಹಾಗೂ ಪ್ರಾಪ್ತಿಯ ಅನುಭೂತಿ ಆಗುವುದು. ಎಂದರೆ ಪ್ರತಿಯೊಂದು ಮಾತು ಸಮರ್ಥ ಅಥವಾ ಫಲವನ್ನು ನೀಡುವಂತೆ ಆಗುವುದು. ಅದನ್ನೇ ಸತ್ಯವಚನ ಎಂದು ಕರೆಯಲಾಗುವುದು. ಅಂತಹ ಕರ್ಮ ಹಾಗೂ ನುಡಿಯಲ್ಲಿ ಸತ್ಯತೆಯ ಘನತೆ ಇರುವುದು. ಅವರ ಸಂಪರ್ಕ ಎಂದರೆ ಸಂಗವು ನಿಜ ಆಗಿರುವ ಕಾರಣದಿಂದ ಸ್ಪರ್ಶಮಣಿಯ ಕಾರ್ಯವನ್ನು ಮಾಡುವುದು. ಹೇಗೆ ಸ್ಪರ್ಶಮಣಿಯು ಕಬ್ಬಿಣವನ್ನು ಪರಿವರ್ತನೆ ಮಾಡಿಬಿಡುತ್ತದೆಯೋ ಹಾಗೆಯೇ ರಿಯಾಲಿಟಿಯ ರಾಯಲ್ಟಿ ಇರುವ ಆತ್ಮರ ಸಂಗವು ಆ ಅಸಮರ್ಥರನ್ನು ಸಮರ್ಥರನ್ನಾಗಿ ಮಾಡಿಬಿಡುವುದು. ಎಂದರೆ ನಕಲಿ ಅಥವಾ ಕೃತಕ ಆಗಿರುವುದನ್ನು ನಿಜವಾದುದನ್ನಾಗಿ ಅಥವಾ ಅಪ್ಪಟವಾದುದನ್ನಾಗಿ ಮಾಡಿಬಿಡುವುದು. ಅಂತಹ ಆತ್ಮ ನಿಜವಾದ ರಾಯಲ್ಟಿಯುಳ್ಳ ನೇತ್ರಗಳು ಎಂದರೆ ದಿವ್ಯ ದೃಷ್ಟಿಯು ಮಂತ್ರಗಾರಿಕೆಯ ವಸ್ತುವಿನ ಸಮಾನ ಕಾರ್ಯವನ್ನು ಮಾಡುವುದು. ಈಗತಾನೇ ಮುಕ್ತಿಯ ಸ್ಥಿತಿಯ ಅನುಭೂತಿ ಮತ್ತೆ ಇದೀಗಲೇ ಜೀವನ್ಮುಕ್ತಿಯ ಅನುಭೂತಿ, ಈಗತಾನೇ ಅಂತಿಮ ಜನ್ಮದ ಮತ್ತೆ ಇದೀಗಲೇ ಪ್ರಥಮ ಜನ್ಮದ ಸ್ಪಷ್ಟ ಸಾಕ್ಷಾತ್ಕಾರ ಮಾಡುವರು. ಈಗತಾನೇ ಅತಿದುಃಖಿತ ಸ್ಥಿತಿ, ಇದೀಗಲೇ ಅತಿ ಸುಖಮಯ ಜೀವನದ ಅನುಭವ ಮಾಡುವರು. ಹಂ ಸೋ ಹಂ ಅಥವಾ ನಾವೇ ಅವರು ಆಗುವೆವು ಎನ್ನುವ ಮಂತ್ರಗಾರಿಕೆಯ ಮಂತ್ರದ ಅನುಭವವನ್ನು ಮಾಡಿಸುವುದು. ಎಂದರೆ 84 ಜನ್ಮಗಳ ಜ್ಞಾನವನ್ನು ಸ್ಮೃತಿಯಲ್ಲಿ ತಂದು ಕೊಡುವುದು. ಈಗತಾನೇ ಸ್ಥೂಲ ಲೋಕದ, ಸಂಗಮಯುಗದ ಸುಖದ ಅನುಭೂತಿ ಮಾಡಿಸುವರು, ಇದೀಗಲೇ ಸೂಕ್ಷ್ಮದೇವತೆಯ ಸ್ವರೂಪದ ಅನುಭವ ಮಾಡಿಸುವರು. ಈಗತಾನೇ ಪರಮಧಾಮ ನಿವಾಸಿ ಆತ್ಮಿಕ ಸ್ವರೂಪದ ಅನುಭವವನ್ನು ಮಾಡಿಸುವರು ಮತ್ತೆ ಇದೀಗಲೇ ಸ್ವರ್ಗದ ಸುಖಮಯ ಜೀವನದ ಅನುಭವವನ್ನು ಮಾಡಿಸುವರು. ಒಂದು ಸೆಕೆಂಡ್ ನಲ್ಲಿ ಈ ನಾಲ್ಕೂ ಧಾಮಗಳ ಅನುಭವವನ್ನು ಮಾಡಿಸುವರು. ಇದು ಜಾದೂ ಮಂತ್ರವಾಗಿದೆ.

ಇಂತಹ ಘನತೆ ಉಳ್ಳವರು. ಸದಾ ಕರ್ಮೇಂದ್ರಿಯಗಳ ಮೂಲಕ ಯಾವುದಾದರೊಂದು ಪ್ರಾಪ್ತಿಯನ್ನು ಮಾಡಿಸುವವರು ಎಂದರೆ ನೀಡುವ ದಾತಾ ಆಗಿರುವರು. ಇಂತಹ ಘನತೆ ಉಳ್ಳವರು ಯಾವುದೇ ಪ್ರಕಾರದ ಮಾಯಾವೀ ಆಕರ್ಷಣೆಯ ಕಡೆಗೆ ಸಂಕಲ್ಪದ ಮೂಲಕವೂ ಸಹ ತಲೆಬಾಗುವುದಿಲ್ಲ, ಎಂದರೆ ಪ್ರಭಾವಿತರಾಗುವುದಿಲ್ಲ. ಹೇಗೆ ಈಗಿನ ಕಾಲದ ಘನತೆ ಉಳ್ಳ ಆತ್ಮರು ಸದಾ ಸಮೃದ್ಧಿಯಾಗಿ ಇರುವ ಕಾರಣದಿಂದ ಎಲ್ಲಂದರೆ ಅಲ್ಲಿ, ಯಾರ ಅಧೀನವೂ ಆಗುವುದಿಲ್ಲ. ಹಾಗೆಯೇ ಸದಾ ಬುದ್ಧಿಯು ಭರ್ತಿ ಆಗಿರುವ ಕಾರಣದಿಂದ, ಸ್ಥೂಲವಾದ ಹೊಟ್ಟೆಯು ತುಂಬಿದೆ. ಎಂದು ಹೇಳುತ್ತಾರೆ. ಹಾಗೂ ಇಲ್ಲಿ ಬುದ್ಧಿಯು ಪ್ರತಿಯೊಂದು ಖಜಾನೆಯಿಂದ ತುಂಬಿರುವುದು. ಆದಕಾರಣ ಯಾವುದೇ ವ್ಯಕ್ತಿ ಅಥವಾ ವೈಭವದ ಕಡೆಗೆ ಅಲ್ಪಜ್ಞರು ಹಾಗೂ ಏನು ಅಲ್ಪಕಾಲದ್ದು ಆಗಿದೆಯೋ ಆ ಕಡೆಗೆ ಬುದ್ಧಿಯು ಹೋಗುವುದಿಲ್ಲ. ಎಂದರೆ ಪ್ರಾಪ್ತಿಯಾಗದ ವಸ್ತುವು ಯಾವುದೂ ಇರುವುದಿಲ್ಲ. ಆದ್ದರಿಂದ ಯಾವುದೇ ವಸ್ತುವನ್ನು ತೆಗೆದುಕೊಳ್ಳುವ ಸಲುವಾಗಿ ದೃಷ್ಟಿಯು ಎಲ್ಲಂದರೆ ಅಲ್ಲಿ ಹೋಗುವುದಿಲ್ಲ. ಅವರ ಕಣ್ಣುಗಳಲ್ಲಿ ಸದಾ ಬಿಂದುರೂಪ ತಂದೆಯೇ ತುಂಬಿಕೊಂಡಿರುವರು. ಅಂತಹ ಘನತೆ ಎಂದರೆ ಸತ್ಯತೆ(ನೈಜತೆ). ಈ ದೇಹವೂ ಸಹ ನಿಜ ಅಲ್ಲ. ದೇಹೀ ಎಂದರೆ ಆತ್ಮವು ನಿಜ ಆಗಿದೆ. ಆದ್ದರಿಂದ ಸತ್ಯತೆಯ ಘನತೆಯು ನನ್ನಲ್ಲಿ ಎಷ್ಟು ತುಂಬಿದೆ ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿರಿ. ಅನುಕ್ರಮವಾಗಿ ಇರುವುದಿಲ್ಲವೇ. ನನ್ನ ಕ್ರಮಸಂಖ್ಯೆಯು ಯಾವುದು ಎನ್ನುವುದನ್ನು ಶೋಧನೆ ಮಾಡಿಕೊಳ್ಳಿರಿ. ಮೊದಲನೆಯ ವರ್ಗದಲ್ಲಿ ಇದ್ದೀರೋ ಅಥವಾ ಎರಡನೆಯದರಲ್ಲಿಯೋ? ಮೂರನೆಯ ವರ್ಗ ಎಂದು ಹೇಳುವುದಿಲ್ಲ ತಾನೇ. ಪಂಜಾಬಿನ ಕ್ರಮಸಂಖ್ಯೆಯು ಯಾವುದಾಗಿದೆ? ಎಲ್ಲರೂ ಮೊದಲನೆಯ ವರ್ಗದವರಾಗಿದ್ದೀರಿಲ್ಲವೇ. ಒಂದುವೇಳೆ ಎರಡನೆಯದರಲ್ಲಿ ಇದ್ದರೂ ಮೊದಲನೆಯದರಲ್ಲಿ ಬಂದುಬಿಡಿ. ಎರಡನೆಯ

ವರ್ಗದವರಿಗೆ ಈಗ ಸಂಗಮುಗದಲ್ಲಿಯೂ ಸಹ ಸರ್ವಪ್ರಾಪ್ತಿಗಳ ಅನುಭೂತಿಯು ಆಗುವುದಿಲ್ಲ. ಒಂದೊಂದು ಪ್ರಾಪ್ತಿಯು ಆಗುವುದು, ಒಂದೊಂದು ಆಗುವುದಿಲ್ಲ. ಹೇಗೆ ಶಾಂತಿಯ ಅನುಭೂತಿಯಂತೂ ಆಗುತ್ತದೆ ಆದರೆ ಅತೀಂದ್ರಿಯ ಸುಖದ ಅನುಭೂತಿ ಆಗುವುದಿಲ್ಲ ಎಂದು ಅನೇಕರು ಹೇಳುತ್ತಾರೆ. ಆನಂದದ ಅನುಭೂತಿ ಆಗುತ್ತದೆ ಆದರೆ ಶಕ್ತಿರೂಪದ ಅನುಭೂತಿ ಆಗುವುದಿಲ್ಲ ಎಂದು ಹೇಳುತ್ತಾರೆ. ಮೊದಲನೆಯ ವರ್ಗದವರಿಗೆ ಪ್ರತಿಯೊಂದು ಗುಣದ ಅನುಭೂತಿ, ಪ್ರತಿಯೊಂದು ಸುಖದ ಅನುಭೂತಿ ಆಗುವುದು. ಒಂದುವೇಳೆ ಯಾವುದಾದರೂ ಕಡಿಮೆ ಇದ್ದರೆ ಅವರು 14 ಕಲೆ ಉಳ್ಳವರು, ಎರಡನೆಯ ವರ್ಗದವರು. ಅಂತಹ ಆತ್ಮರು ಈಗಲೂ ಸಹ ಶ್ರೇಷ್ಠ ಪ್ರಾಪ್ತಿಯಿಂದ ವಂಚಿತರಾಗಿ ಉಳಿದುಬಿಡುತ್ತಾರೆ. ಹಾಗೂ ಭವಿಷ್ಯದಲ್ಲಿಯೂ ಸಹ ಸತೋಪ್ರಧಾನ(ಸತ್ಯಯುಗ) ಪ್ರಾಪ್ತಿಗೆ ಬದಲಾಗಿ ಸತ್ವ ಉಳ್ಳ(ತ್ರೇತಾಯುಗ) ಪ್ರಾಪ್ತಿಯನ್ನು ಮಾಡಿ ಕೊಳ್ಳುತ್ತಾರೆ. ಆದ್ದರಿಂದ ಎರಡನೆಯ ವರ್ಗದವರಾಗಿಬಿಟ್ಟರಲ್ಲವೇ. ಮೊದಲನೆಯ ವರ್ಗದವರು ರಾಜ್ಯದ ಹಾಗೂ ಪ್ರಕೃತಿಯ ಸತೋ ಪ್ರಧಾನತೆಯ ಸುಖವನ್ನು ಅನುಭವಿಸುವರು ಹಾಗೂ ಎರಡನೆಯ ವರ್ಗದವರು ಸತ್ವ(ಸತೋ)ದ ಸುಖವನ್ನು ಅನುಭವಿಸುವರು, ಸತೋಪ್ರಧಾನದ್ದಲ್ಲ. ಈಗ ನಾನು ಯಾವುದನ್ನು ತೆಗೆದುಕೊಳ್ಳಬೇಕು ಎಂದು ಆಲೋಚನೆ ಮಾಡಿರಿ. ಸತೋಪ್ರದಾನತೆಯ ಪ್ರಾಪ್ತಿಯನ್ನೋ ಅಥವಾ ಸತ್ವದ ಪ್ರಾಪ್ತಿಯನ್ನೋ, ಸರ್ವಪ್ರಾಪ್ತಿಗಳ ಅನುಭೂತಿಯನ್ನೋ ಅಥವಾ ಒಂದೊಂದು ಪ್ರಾಪ್ತಿಯ ಅನುಭೂತಿಯನ್ನೋ, ಸ್ವಯಂ ನೀವೇ ನಿಮ್ಮ ನ್ಯಾಯಾಧೀಶರಾದರೆ ಧರ್ಮರಾಜನ ಬಳಿ ಹೋಗಬೇಕಾಗುವುದಿಲ್ಲ. ರಿಯಾಲ್ಟಿಯರ ರಾಯಲ್ಟಿಯು ಎಂತಹುದು ಎನ್ನುವುದನ್ನು ತಿಳಿದುಕೊಂಡಿರುವಿರಾ? ಘನತೆಯ ವಿಸ್ತಾರವು ಇನ್ನೂ ಏನು ಇದೆ ಎನ್ನುವುದನ್ನು ಮುಂದೆ ತಿಳಿಸುವೆನು.

**ಹೀಗೆ ಸದಾ ಘನತೆಯಲ್ಲಿ ಇರುವವರು, ಸದಾ ಸ್ವರ್ಗಸುಖದ ಪ್ರಾಪ್ತಿಯ ಅನುಭೂತಿಸ್ವರೂಪ, ಪ್ರತಿಯೊಂದು ಕರ್ಮವು ಚರಿತ್ರೆ ಎಂದರೆ ಶ್ರೇಷ್ಠವನ್ನಾಗಿ ಮಾಡುವವರು, ಒಂದು ಸೆಕೆಂಡ್‌ನಲ್ಲಿ ನಾಲ್ಕೂ ಧಾಮಗಳ ಅನುಭವವನ್ನು ಮಾಡಿಸುವವರು ಅಂತಹ ಶ್ರೇಷ್ಠ ಅದೃಷ್ಟವಂತ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ದೀದಿಯವರೊಂದಿಗೆ** : ಭವಿಷ್ಯದ ರಾಜ್ಯದ ರಾಜ ಪರಿವಾರವು ಈಗಿನಿಂದಲೇ ಪ್ರತ್ಯಕ್ಷ ಆಗುತ್ತಾ ಹೋಗುವುದಲ್ಲವೇ. ಅಂತ್ಯದಲ್ಲಿ ಎಲ್ಲವೂ ಸ್ಪಷ್ಟ ಸಾಕ್ಷಾತ್ಕಾರ ಆಗುವುದು ಎನ್ನುವ ಬಾಪ್‌ದಾದಾರವರ ನುಡಿಯನ್ನು ಏನು ಕೇಳಿದ್ದೀರೋ ಅದು ದಿವ್ಯದೃಷ್ಟಿಯಿಂದ ಆಗುವುದೇನು? ಸಾಕ್ಷಾತ್ಕಾರದಲ್ಲಿ ಆಗುತ್ತದೆಯೋ ಅಥವಾ ಸಾಕ್ಷಾತ್ ರೂಪದಲ್ಲಿ ಆಗುತ್ತದೆಯೋ? ಎಲ್ಲರಿಗೂ ದಿವ್ಯದೃಷ್ಟಿಯಿಂದ ಸಾಕ್ಷಾತ್ಕಾರ ಆಗುವ ನಾಟಕವಂತು ಬೇರೆ ಇರುವುದು. ಆದರೆ ಇದು ಸಾಕ್ಷಾತ್ ರೂಪದಲ್ಲಿ ಸಾಕ್ಷಾತ್ಕಾರ ಆಗುವುದು. ಈಗ ಶೀಘ್ರವಾಗಿಯೇ ಪ್ರತಿಯೊಂದು ಆತ್ಮವು ತನ್ನ ನೈಜತೆಯ(ರಿಯಾಲ್ಟಿ) ಮೂಲಕ ಘನತೆಯ(ರಾಯಲ್ಟಿ) ರೂಪವನ್ನು ಪ್ರತ್ಯಕ್ಷರೂಪದಲ್ಲಿ ತೋರಿಸುವುದು. ಇದು ಆಗುವುದೋ ಇಲ್ಲವೋ ಎನ್ನುವ ಪ್ರಶ್ನೆಯು ಯಾರಿಗೂ ಇದರಲ್ಲಿ ಉತ್ಪನ್ನ ಆಗುವುದಿಲ್ಲ ಈಗಲಾದರೂ ಪರಸ್ಪರ ಕಲಿತು ಒಂದುವೇಳೆ ಕ್ರಮ ಸಂಖ್ಯೆಯನ್ನು ನಿಗದಿ ಮಾಡಿದರೆ ಇದು ಹೇಗೆ, ಇದೇಕೆ ಹೀಗೆ ಎನ್ನುವ ಪ್ರಶ್ನೆಯು ಉತ್ಪನ್ನ ಆಗುತ್ತದೆ. ಆದರೆ ಇನ್ನು ಶೀಘ್ರದಲ್ಲಿಯೇ ಪ್ರತ್ಯಕ್ಷವಾಗಿ ನೋಡುವಿರಿ. ರಾಜರು ಯಾರು, ರಾಣಿಯು ಯಾರು ಅಥವಾ ರಾಜಕುಲದವರು ಯಾರು ಎನ್ನುವುದನ್ನು ನೋಡುವಿರಿ. ಇದರ ಪುರುಷಾರ್ಥದ ಗತಿಯು ತುಂಬಾ ಗಹನ ಆಗಿದೆ. ಸಮಾನ ಆಗಿದ್ದರೂ ಸಹ ಈಗ ಪುರುಷಾರ್ಥದ ಗತಿಯು ಗುಹ್ಯ ಆಗಿರುವ ಕಾರಣದಿಂದ ಮೊದಲನೆಯವರು, ಎರಡನೆಯವರು ಎಂದು ಕ್ರಮಸಂಖ್ಯೆ ನಿಗದಿ ಆಗಿಬಿಡುವುದು. ಈಗ ಪ್ರತಿಯೊಬ್ಬರ ಪುರುಷಾರ್ಥದ ವಿಶೇಷತೆಯು ಕಂಡುಬರುತ್ತದೆ, ಆದರೆ ಹೇಗೆ ಏನಾದರೂ ಧೂಳಿನ ಒಳಗೆ ವಜ್ರವು ಹೊಳೆಯುತ್ತದೆಯೋ, ಒಮ್ಮೊಮ್ಮೆ ಸ್ಪಷ್ಟವಾಗಿ ಕಾಣುವುದು, ಒಮ್ಮೊಮ್ಮೆ ಬಚ್ಚಿಟ್ಟುಕೊಂಡಿರುವಂತೆ ಕಂಡುಬರುವುದು. ಆದ್ದರಿಂದ ಈಗಿನ ಪುರುಷಾರ್ಥದಲ್ಲಿ ಪ್ರಕಾಶಿಸುತ್ತಿರುವ ವಜ್ರವಾಗಿಯೇ ಕಂಡುಬರಬಹುದು. ಆದರೆ ಮುಂದೆ ಅಂತ್ಯದಲ್ಲಿ, ಅಂತ್ಯ ಎಂದರೆ ಕೊನೆ ಅಲ್ಲ, ಸಂಗಮಯುಗದ ಅಂತ್ಯ ಎಂದರೆ ಸ್ವಲ್ಪ ಸಮಯಕ್ಕೆ ಮೊದಲಿನಿಂದಲೇ ಪ್ರತ್ಯಕ್ಷತೆಯು ಅವಶ್ಯವಾಗಿ ಆಗುವುದು. ಪ್ರತ್ಯಕ್ಷತೆಯ ಪಾತ್ರವನ್ನು ಅಭಿನಯಿಸುತ್ತಾ ನಿಮ್ಮ ವರ್ತಮಾನ ಮಾಲೆಯ ಮಣಿಯ ಕ್ರಮಸಂಖ್ಯೆಯ ಹಾಗೂ ಭವಿಷ್ಯ ರಾಜ್ಯದ ಸ್ವರೂಪ ಎರಡೂ

ಪ್ರತ್ಯಕ್ಷ ಆಗುವುವು. ಆದರೆ ಇನ್ನೂ ಅಲ್ಪಸ್ವಲ್ಪ ಅಸೂಯೆಯ ಧೂಳಿನ ಪರದೆ ಇದೆ. ಇನ್ನೂ ಓಟದ ಪಂದ್ಯದಲ್ಲಿ ನಡೆಯುತ್ತಾ ನಡೆಯುತ್ತಾ ಒಮ್ಮೊಮ್ಮೆ ಸ್ಪರ್ಧೆಗೆ ಬದಲಾಗಿ ಅಸೂಯೆಯಲ್ಲಿ ಪರಿವರ್ತನೆ ಆಗಿಬಿಡುತ್ತದೆ. ಈ ಧೂಳಿನ ಪರದೆಯೇ ಹೊಳೆಯುತ್ತಿರುವ ವಜ್ರಗಳನ್ನು ಮರೆಮಾಡಿಬಿಡುತ್ತದೆ ಹಾಗೂ ಈ ಪರದೆಯು ದೂರ ಸರಿದಾಗ ಮರೆಮಾಡಲ್ಪಟ್ಟಿರುವ ವಜ್ರಗಳು ತಮ್ಮ ಪ್ರತ್ಯಕ್ಷತೆಯ ಸಂಪನ್ನ ಸ್ವರೂಪದಲ್ಲಿ ಬಂದುಬಿಡುವುವು. ಈ ಪರದೆಯು ಸಮಾಪ್ತಿ ಆಗಿಬಿಡುವುದು. ಸಂಪನ್ನತೆಯ ಸಾಕ್ಷಾತ್ಕಾರವು ಆಗುವುದರಿಂದ ಯಾರಲ್ಲಿಯೂ ಇವರೂ ಸಹ ಈ ಕ್ರಮಸಂಖ್ಯೆಯನ್ನು ತೆಗೆದುಕೊಳ್ಳಬಲ್ಲರೇ ಎನ್ನುವ ಸಂಕಲ್ಪವೇ ಬರುವುದಿಲ್ಲ. ಎಂದರೆ ಅಸೂಯೆಯ ಪರದೆಯು ಅಳಿದುಹೋಗುವುದು ಹಾಗೂ ಸಂಪನ್ನ ವಜ್ರಗಳು ಹೊಳೆಯುತ್ತಾ ವೇದಿಕೆಯಮೇಲೆ ಪ್ರತ್ಯಕ್ಷ ಆಗಿಬಿಡುವುವು. ಹೇಗೆ ಸಾಕಾರದಲ್ಲಿಯ ಮಮ್ಮಾ ಬ್ರಹ್ಮಾ ಬಾಬಾರವರ ಕಡೆಗೆ ಯಾರಿಗೂ ಅಸೂಯೆಯು ಇರಲು ಸಾಧ್ಯವಿಲ್ಲ. ಹಾಗೆಯೇ ಅನುಕ್ರಮವಾಗಿ ಎಷ್ಟು ಸ್ಪಷ್ಟ ಆಗುವುದು ಎಂದರೆ ಯಾರೂ ಅಸೂಯೆ ಪಡಲು ಸಾಧ್ಯವಾಗುವುದಿಲ್ಲ. ಇಂತಹ ರಾಜಕುಲವು ಈಗಿನಿಂದಲೇ ಘನತೆಯಲ್ಲಿ ಕಂಡುಬರುವುದು. ಇನ್ನೂ ಎಂಟು ಸ್ಥಾನದವರನ್ನು ಆರಿಸಲು ಸಾಧ್ಯವಿಲ್ಲ ತಾನೇ. ಇನ್ನೂ ಪ್ರಶ್ನಾರ್ಥಕ ಚಿಹ್ನೆಯು ಬಂದುಬಿಡುತ್ತದೆ. ಇನ್ನು ಪೂರ್ಣ ವಿರಾಮವು ಬಂದುಬಿಡುವುದು. ಇನ್ನೂ ಸ್ಪಷ್ಟರೂಪದಲ್ಲಿ ಎಂಟು ಕ್ರಮಸಂಖ್ಯೆಯವರನ್ನು ಆಗಿಸುವುದರಲ್ಲಿಯೂ ಪ್ರಶ್ನೆಯು ಏಳುತ್ತದೆ. ಇವರಿಗೆ ಈ ಸ್ಥಾನವನ್ನು ಕೊಡಬಹುದೋ ಅಥವಾ ಬೇಡವೋ ಎನ್ನುವ ಪ್ರಶ್ನೆಯು ಬರುತ್ತದೆ. ಈಗ ತೀವ್ರಪುರುಷಾರ್ಥದ ಮೆರುಗು ಕೊಡುವುದು ನಡೆಯುತ್ತಾ ಇದೆ. ಹೀಗೆ ಮೆರುಗು ಕೊಡುವುದರಿಂದ ಅಲ್ಪಸ್ವಲ್ಪ ನ್ಯೂನತೆ, ದೋಷಗಳು ಮುಚ್ಚಿಹೋಗುತ್ತವೆ. ಎಂಟು ಸ್ಥಾನಗಳು ಇರುವುದರಿಂದ ಮೊದಲಿ ನಿಂದಲೇ ಸ್ವಲ್ಪ ನ್ಯೂನತೆ ಇರುವುದಲ್ಲವೇ. ಆದರೆ ಸ್ಪಷ್ಟವಾಗಿ ಕಂಡು ಬರುವಷ್ಟು ಕೊರತೆಯು ಇರುವುದಿಲ್ಲ. ಅದಕ್ಕಾಗಿ ಮೆರುಗು ಕೊಡುವ ಕಾರ್ಯವು ನಡೆಯುತ್ತಾ ಇದೆ. ಈಗ ತೀವ್ರಪುರುಷಾರ್ಥದ ಕಾರ್ಯಕ್ರಮದ ಸಂಕಲ್ಪ ಇದೆ. ರಾಜಕುಲದಲ್ಲಂತೂ ಅನೇಕರು ಬಂದುಬಿಡುವರು. ಒಳ್ಳೆಯದು, ಇಂದು ಪಂಜಾಬಿನ ಸರದಿ ಆಗಿದೆ. ಎಂತಹ ಹೆಸರೋ ಅಂತಹದೇ ಕರ್ತವ್ಯ ನಿಮ್ಮದು ಆಗಿದೆಯಲ್ಲವೇ? ಸಿಂಹದ ವಿಶೇಷತೆಯು ಏನಾಗಿದೆ? ಸಿಂಹವು ಒಂಟಿಯಾಗಿದ್ದರೂ ಸಹ ತನ್ನನ್ನು ಇಡೀ ಕಾಡಿಗೆ ಚಕ್ರವರ್ತಿಯೆಂದು ತಿಳಿದುಕೊಂಡಿರುತ್ತದೆ. ಎಂದರೆ ನಿರ್ಭಯ ವಾಗಿರುತ್ತದೆ. ಹಾಗೆಯೇ ಪಂಜಾಬಿನ ನಿವಾಸಿಗಳು ನಿರ್ಭಯರಾಗಿದ್ದೀರಲ್ಲವೇ. ಯಾವುದೇ ಪ್ರಕಾರದ ಮಾಯೆಯ ರೂಪಕ್ಕೆ ಹೆದರುವವರಲ್ಲ ತಾನೇ. ಪಂಜಾಬಿನವರು ಅಂತಹವರಾದ್ದೀರಲ್ಲವೇ.

ಪಂಜಾಬಿನ ಭೂಮಿಯ ವಿಶೇಷ ಮಹತ್ವವೇನು ಗೊತ್ತಿದೆಯೇ? ಪಂಜಾಬ್ ಸ್ಥಾಪನೆಯ ಆದಿಯಲ್ಲಿ ತನ್ನ ವಿಶೇಷ ಶಕ್ತಿರೂಪದ ದೃಶ್ಯವನ್ನು ಚೆನ್ನಾಗಿ ಪ್ರದರ್ಶಿಸಿತು. ಅನೇಕ ಪ್ರಕಾರದ ಗೊಂದಲದಲ್ಲಿಯೂ ಸಹ ಅಚಲವಾಗಿ ಇರುತ್ತಾ ಬಂದಿದ್ದೀರಿ. ಏಕೆಂದರೆ ಪಂಜಾಬಿನ ಧರಣಿಯು ವಿಶೇಷ ಧರ್ಮದ ಭೂಮಿ ಆಗಿದೆ. ಇಂತಹ ಧರ್ಮದ ಧರಣಿಯಲ್ಲಿ ಆದಿ ಸನಾತನ ಧರ್ಮದ ಸ್ಥಾಪನೆ ಮಾಡುವುದರಲ್ಲಿ ವಿಘ್ನಗಳನ್ನು ಎದುರಿಸಿ ವಿಜಯಶಾಲಿಗಳಾಗಿದ್ದೀರಿ. ಪಂಜಾಬಿನ ಭೂಮಿಯ ವಿಶೇಷತೆಯು "ನಾಲ್ಕೂ ಕಡೆ ದಾಂಧಲೆಗಳ ಬೆಂಕಿಯ ಮಧ್ಯದಲ್ಲಿ ಕೆಲವೇ ಮಕ್ಕಳು ಜಯಶಾಲಿಗಳಾಗಿ ಪಂಜಾಬಿನಲ್ಲಿಯೂ ಸಹ ವಿಜಯದ ಬಾವುಟವನ್ನು ಹಾರಿಸಿದರು" ಎಂಬುದಾಗಿ ಚರಿತ್ರೆಯಲ್ಲಿ ಉಲ್ಲೇಖಿತವಾಗಿದೆ. ಹಿಂಸಕ ಧರಣಿಯಮೇಲೆ ಅಹಿಂಸಕರ ವಿಜಯ ಆಯಿತು. ಇದೂ ಸಹ ಪಂಜಾಬಿನ ಭೂಮಿಯ ಚರಿತ್ರೆ ವಿಶೇಷ ರೂಪದಲ್ಲಿ ವರ್ಣಿಸಲ್ಪಡುತ್ತದೆ. ಇನ್ನೊಂದು ವಿಶೇಷತೆ ಏನೆಂದರೆ ಪಂಜಾಬಿನಲ್ಲಿ ನದಿಗಳ ಪ್ರಸಿದ್ಧಿಯು ಹೆಚ್ಚಿಗೆ ಇದೆ. ಹಾಗೆಯೇ ಪಂಜಾಬಿನಿಂದ ಜ್ಞಾನಗಂಗೆಯರೂ ಸಹ ಅಧಿಕ ಸಂಖ್ಯೆಯಲ್ಲಿ ಜನ್ಮ ಪಡೆದಿದ್ದೀರಿ. ಆದಿ ಸಮಯದ ಲೆಕ್ಕದಿಂದ ಪಂಜಾಬಿನಿಂದ ಜ್ಞಾನನದಿಗಳು ಸಹ ಹೆಚ್ಚು ಹುಟ್ಟಿವೆ. ಆದ್ದರಿಂದ ಪಂಜಾಬಿನ ಧರಣಿಯು ಕನ್ಯಾದಾನದಲ್ಲಿ ಶ್ರೇಷ್ಠವಾಗಿ ಹೊರಬಿದ್ದಿದೆ. ಎಂದರೆ ಮಹಾದಾನಿ ಆಗಿದೆ. ಮೂರನೆಯ ವಿಶೇಷತೆಯು ಯಾವುದೆಂದರೆ ಪಂಜಾಬಿನ ಭೂಮಿಯಲ್ಲಿ ಸೇವೆಯ ವಿಸ್ತಾರದ ಕ್ಷೇತ್ರವೂ ಸಹ ಮಹತ್ವಪೂರ್ಣ ಆಗಿದೆ. ಹೇಗೆ ನದಿಗಳ ನೀರು ನಾಲ್ಕೂ ಕಡೆ ವಿಸ್ತಾರವಾಗಿ ಹರಡಿದೆಯೋ ಹಾಗೆಯೇ ಪಂಜಾಬಿನಲ್ಲಿಯೂ ಸೇವಾ ಕೇಂದ್ರಗಳ ವಿಸ್ತಾರವು ಚೆನ್ನಾಗಿದೆ. ನಾನಾ ಸ್ಥಳಗಳಲ್ಲಿ ತೀರ್ಥಸ್ಥಾನಗಳು ರಚನೆಯಾಗಿವೆ.

ಮಹಿಮೆಯನ್ನು ಕೇಳಿ ಆನಂದ ಹೊಂದಿದಿರಿ. ಸದಾ ಹೀಗೆಯೇ ಆನಂದದಿಂದ ಇರಿ. ಪಂಜಾಬಿನ ವಿಸ್ತಾರವನ್ನು ನೋಡಿ ಬಾಪ್‌ದಾದಾ ಸಂತೋಷ ಪಡುತ್ತಾರೆ. ಈಗ ಏನು ಮಾಡಬೇಕು? ಪಂಜಾಬಿನ ಭೂಮಿಯಿಂದ ಹೆಸರಿನಂತೆ ಕಾರ್ಯ ಮಾಡುವವರನ್ನು ಸಾರವುಳ್ಳ ಆತ್ಮರನ್ನು ಹುಡುಕಿ ತೆಗೆಯಿರಿ. ಅವರ ಹೆಸರನ್ನು ಕೇಳುತ್ತಲೇ ಅನೇಕ ಆತ್ಮರು ತಮ್ಮ ಭಾಗ್ಯವನ್ನು ರೂಪಿಸಿಕೊಳ್ಳುವಂತಾಗಲಿ. ಇಂತಹ ವಿಶೇಷ ಸೇವೆಯನ್ನು ಈಗ ಇನ್ನೂ ಹೆಚ್ಚು ಮಾಡಬೇಕಾಗಿದೆ. ಕೇವಲ ಸೇವೆಯ ನಿಮಿತ್ತ, ಅಂತಹ ವಿಶೇಷ ಆತ್ಮರದೂ ಪಾತ್ರ ಇದೆ. ಆದ್ದರಿಂದ ಅಂತಹ ಆತ್ಮರನ್ನು ಈಗ ಸಂಪರ್ಕ, ಸಂಬಂಧದಲ್ಲಿ ಕರೆತನ್ನಿರಿ. ಏನು ಮಾಡಬೇಕು ಎನ್ನುವುದು ಗೊತ್ತಾಯಿತೇ. ಬಹಳ ಜೋರಾಗಿ ಘೋಷಣೆ ಮಾಡಿರಿ. ಸಣ್ಣ ಧ್ವನಿಯಲಲಿ ಘೋಷಣೆ ಮಾಡಿದರೆ ಸಣ್ಣ ಶಬ್ದವು ಅಲ್ಲಿಯ ಗುರುದ್ವಾರಗಳ ಶಬ್ದದಲ್ಲಿ ಅಡಗಿಹೋಗುತ್ತದೆ. ಒಳ್ಳೆಯದು.

**ತಂಡಗಳ ಜೊತೆಯಲ್ಲಿ:**

ಬಾಪ್‌ದಾದಾ ಮಕ್ಕಳಲ್ಲಿ ಪ್ರತಿಯೊಬ್ಬರನ್ನೂ ಸರ್ವಶ್ರೇಷ್ಠ ಆತ್ಮರ ರೂಪದಲ್ಲಿ ನೋಡುತ್ತೇವೆ. ಏಕೆಂದರೆ ವಿಶ್ವದಲ್ಲಿ ಎಷ್ಟೇ ಶ್ರೇಷ್ಠ ಆತ್ಮರಾಗಿದ್ದರೂ ನಿಮ್ಮ ಮುಂದೆ ಅವರು ಎಂತಹವರು? ತುಚ್ಛ ಎಂದರೆ ಯಾತಕ್ಕೂ ತರವಲ್ಲದವರು. ಆ ಆತ್ಮರು ತಮ್ಮ ಅವಿನಾಶಿ ತಂದೆಯ ವಿಶೇಷ ರಚನೆ ಎಂದರೆ ಸ್ವರ್ಗದ ಅಧಿಕಾರಿ ಆಗಲಾರರು. ಯಾವ ಮಕ್ಕಳು ತಂದೆಯ ಆಸ್ತಿಯ ಅಧಿಕಾರದಿಂದ ವಂಚಿತರಾಗಿ ಬಿಡುತ್ತಾರೋ ಅಂತಹವರು ಏನು ಪ್ರಯೋಜನ? ಆದ್ದರಿಂದ ಎಷ್ಟೆ ಈಗಿನಕಾಲದ ಸುಪ್ರಸಿದ್ಧ ಆತ್ಮರಾಗಿದ್ದರೂ ಅವರು ನಿಮ್ಮ ಶ್ರೇಷ್ಠ ಪ್ರಾಪ್ತಿಯ ಮುಂದೆ ಕೆಲಸಕ್ಕೆಬಾರದವರು. ಆದ್ದರಿಂದ ನೀವು ಎಲ್ಲರಿಗಿಂತಲೂ ಶ್ರೇಷ್ಠರಾದಿರಿ ಅಲ್ಲವೇ. ಈಗಿನ ಪ್ರಪಂಚದಲ್ಲಿ ನೀವು ಬ್ರಹ್ಮಾಕುಮಾರಿಯರಿಗೆ ಬದಲಾಗಿ ರಾಷ್ಟ್ರಾಧ್ಯಕ್ಷರಾಗಿಬಿಡಿ ಎಂದು ಯಾರಾದರೂ ಹೇಳಿದರೆ ಆಗುವಿರಾ? ಆಗುವುದಿಲ್ಲ ತಾನೇ. ಏಕೆಂದರೆ ಹಳೆಯ ಪ್ರಪಂಚದ ಅಲ್ಪಕಾಲದ ಪದವಿಗೂ ಹಾಗೂ ಭವಿಷ್ಯದ ಸದಾಕಾಲದ ಪದವಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂಬುದು ನಿಮಗೆ ಗೊತ್ತಿದೆ. ಆದ್ದರಿಂದ ಸಂಕಲ್ಪ ಮಾತ್ರದಲ್ಲಿಯೂ ಸಹ ಬುದ್ಧಿಯು ಅಲ್ಲಿ ಆಕರ್ಷಿತ ಆಗಲು ಶಕ್ಯವಿಲ್ಲ. ಏಕೆಂದರೆ ರಾಜರುಗಳು ರಾಜ ಆಗುತ್ತಿರುವಾಗ ಇದರಿಂದ ಏನು ಪ್ರಯೋಜನ? ಈಗಿನ ರಾಷ್ಟ್ರಾಧ್ಯಕ್ಷರು ಕಿರೀಟವಿಲ್ಲದ ಚಕ್ರವರ್ತಿಗಾದರೂ ಅಧಿಕಾರ ಇರುತ್ತದೆ. ಅದು ಇವರಲ್ಲಿ ಎಲ್ಲಿ ಇದೆ? ಮೊದಲನೆಯದಾಗಿ ಕಿರೀಟರಹಿತರು ಹಾಗೂ ಎರಡನೆಯದಾಗಿ ಶಕ್ತಿ ಇಲ್ಲದವರು, ಆದ್ದರಿಂದ ನಿಮಗೆ ಆಕರ್ಷಣೆ ಆಗುವುದಿಲ್ಲ ತಾನೇ. ಇಂತಹ ಶ್ರೇಷ್ಠತೆ ಅಥವಾ ಮಹಾನತೆಯು ಸದಾ ಸ್ಮೃತಿಯಲ್ಲಿ ಇರಲಿ. ಸದಾ ಸ್ಮೃತಿಸ್ವರೂಪ ಆಗಿದ್ದರೆ ಸರ್ವಪ್ರಾಪ್ತಿಗಳ ಅನುಭವವನ್ನು ಮಾಡಬಹುದು. ಸ್ವಲ್ಪದಲ್ಲಿಯೇ ತೃಪ್ತರಾಗುವವರು ಯಾರು? ಭಕ್ತರು. ಆದ್ದರಿಂದ ನೀವು ಭಕ್ತರಾಗಿಲ್ಲ ತಾನೇ. ಅಧಿಕಾರಿ ಆಗಿದ್ದೀರಲ್ಲವೇ. ಅಧಿಕಾರಿಗೆ ತನ್ನ ಅಧಿಕಾರಾರದ ಅನುಭವವು ಆಗುತ್ತದೆ. ಇಂದು ಮನೆಯಲ್ಲಿರುವವರೂ ಸಹ ಪೂರ್ತಿ ಅಧಿಕಾರವನ್ನು ಬೇಡುತ್ತಾರೆ. ನೌಕರರೂ ಸಹ ಪೂರ್ತಿ ಅಧಿಕಾರವನ್ನು ಬಯಸುವರು. ಒಂದು ವೇಳೆ ಸ್ವಲ್ಪವೇನಾದರೂ ಕಡಿಮೆ ಆಗಿಬಿಟ್ಟರೆ ನನ್ನ ಅಧಿಕಾರವನ್ನು ಕೊಡಿ ಎಂದು ಹೇಳುವರು. ತಂದೆಯಂತು ಸರ್ವ ಅಧಿಕಾರವನ್ನೂ ನೀಡುವವರಾಗಿದ್ದಾರಲ್ಲವೇ. ಆದ್ದರಿಂದ ಸರ್ವ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳಿರಿ. ಭಕ್ತರಾಗಬೇಡಿರಿ, ಅಧಿಕಾರಿ ಆಗಿರಿ. ಭಕ್ತ ಆತ್ಮವು ಎಲ್ಲಿಯವರೆಗೆ ಬ್ರಾಹ್ಮಣ ಆಗುವುದಿಲ್ಲವೋ ಅಲ್ಲಿಯತನಕ ಸ್ವರ್ಗದಲ್ಲಿ ಬರಲು ಸಾಧ್ಯವಿಲ್ಲ. ಭಕ್ತರಿಂದ ಬ್ರಾಹ್ಮಣರಾಗಬೇಕಾಗುತ್ತದೆ. ಆಮೇಲೆ ಬ್ರಾಹ್ಮಣರಿಂದ ದೇವತೆ ಆಗಬಹುದು. ಭಕ್ತತನದ ಅಂಶಮಾತ್ರವೂ ಇರಬಾರದು. ಅಂತಹವರನ್ನೇ ಸಂಪೂರ್ಣ ಅಧಿಕಾರಿ ಎಂದು ಕರೆಯಲಾಗುತ್ತದೆ. ಭಕ್ತ ಹಾಗೂ ಭಗವಂತನ ಮಿಲನ, ಮಗ ಹಾಗೂ ತಂದೆಯ ಮಿಲನ ಇವೆರಡರಲ್ಲಿ ರಾತ್ರಿ ಹಗಲಿನ ವ್ಯತ್ಯಾಸ ಇದೆಯಲ್ಲವೇ. ಆದ್ದರಿಂದ ಯಾವ ಮಿಲನವು ಒಳ್ಳೆಯದೆನಿಸುತ್ತದೆ? ಮಾಯೆಯ ವಶೀಭೂತರಾದಾಗ ಯಾವ ರೂಪದಲ್ಲಿ ಮಿಲನ ಮಾಡುತ್ತೀರಿ? ಕೃಪೆಮಾಡು, ಆಶೀರ್ವಾದ ಮಾಡು, ಶಕ್ತಿಯನ್ನು ನೀಡು, ಏನು ಮಾಡಲಿ, ಹೇಗೆ ಮಾಡಲಿ, ಯಾವುದಾದರೂ ಮಾರ್ಗವನ್ನು ತೋರಿಸು. ನನ್ನ ಬಳಿ ಮಾಯೆಯನ್ನು ಕಳುಹಿಸಬೇಡ ಎಂದು ಹೇಳುವುದು. ದೌರ್ಬಲ್ಯ ಅಲ್ಲವೇ. ಮಾಹಾವೀರರಾಗಿರುವವರು ಶತೃವು ನನ್ನ ಮುಂದೆ ಬರಬಾರದು, ನಾನು ಮಾಹಾವೀರ ಆಗಿದ್ದೇನೆ

ಎಂದು ಹೇಳಿದರೆ ಅವರನ್ನು ಏನೆಂದು ಕರೆಯುವುದು? ಮಹಾವೀರರು ಶತೃವಿನ ಆಹ್ವಾನವನ್ನು ಮಾಡುತ್ತಾರೆ. ನೀನು ಬಂದರೆ ನಾನು ಜಯಶಾಲಿ ಆಗಬಹುದು ಎಂದು ಹೇಳುವರು. ಮಹಾವೀರರು ಪರೀಕ್ಷೆಯನ್ನು ನೋಡಿ ಗಾಬರಿ ಆಗುವುದಿಲ್ಲ. ಅದನ್ನು ನೋಡಿ ಸೆಣೆಸುವರು, ಎಂದರೆ ತ್ರಿಕಾಲದರ್ಶಿ ಆಗಿರುವ ಕಾರಣದಿಂದ ನಾನು ಕಲ್ಪದ ಹಿಂದಿನ ವಿಜಯಶಾಲಿ ಆಗಿದ್ದೇನೆ ಎನ್ನುವುದು ಅವರಿಗೆ ಗೊತ್ತಿರುತ್ತದೆ.

**ರಾಜಾಸ್ಥಾನ ಹಾಗೂ ಇಂದೂರು ಪ್ರದೇಶದ ತಂಡಗಳ ಜೊತೆಯಲ್ಲಿ ಬಾಪ್ ದಾದಾರವರ ವೈಯುಕ್ತಿಕ ಸಂದರ್ಶನ:**

ರಾಜಾಸ್ಥಾನಕ್ಕೆ ವರದಾನವು ತುಂಬಾ ಸಿಕ್ಕಿದೆ. ಮೊಟ್ಟಮೊದಲು ಸೇವೆಯ ಸಾಧನವು ಕೊಡುಗೆಯಲ್ಲಿ ರಾಜಾಸ್ಥಾನಕ್ಕೆ ದೊರೆಯಿತು. ಬಾಪ್‌ದಾದಾ ಇಬ್ಬರ ವರದಾನವೂ ರಾಜಾಸ್ಥಾನಕ್ಕೆ ದೊರೆತಿದೆ. ವರದಾನವು ಫಲವನ್ನೇನೋ ಅವಶ್ಯವಾಗಿ ಕೊಡುವುದು – ಆದರೆ ಯಾವ ಸಮಯದಲ್ಲಿ ಕೊಡುವುದು ಎಂದು ಆ ಸಮಯವನ್ನು ನಿರೀಕ್ಷಿಸುತ್ತಿದ್ದೀರಿ. ಮೇಳದ ಜೊತೆ ಜೊತೆಗೆ ವಿಶೇಷರೂಪದಿಂದ ಎಂತಹ ವಾತಾವರಣವನ್ನು ನಿರ್ಮಿಸಬೇಕೆಂದರೆ ಸೂಜಿಗಲ್ಲು ಹೇಗೆ ಎಲ್ಲರನ್ನೂ ತನ್ನ ಕಡೆಗೆ ಆಕರ್ಷಣೆ ಮಾಡುತ್ತದೆ. ಅಂತಹ ಆತ್ಮೀಯ ವಾತಾವರಣ, ಆತ್ಮರನ್ನು ತನ್ನ ಕಡೆಗೆ ಆಕರ್ಷಣೆ ಮಾಡಬೇಕು. ಇದು ಮೇಳದ ಸಫಲತೆ ಆಗಿದೆ. ವಿಶೇಷ ಗಮನವನ್ನೂ ನೀಡುತ್ತಾ ಪ್ರತಿಯೊಂದು ವರ್ಗದ ಆತ್ಮರಿಗೆ ಈ ಮೇಳದ ಸ್ಥಾನದ ಮೂಲಕ ಸಂಪರ್ಕದಲ್ಲಿ ಕರೆತನ್ನಿರಿ. ಸಾಧನವು ತುಂಬಾ ಆಕರ್ಷಣೆ ಉಳ್ಳದ್ದಾಗಿದೆ. ಸಾಧನದ ಪೂರ್ತಿ ಲಾಭವನ್ನು ತೆಗೆದುಕೊಳ್ಳಿರಿ. ಎಲ್ಲರಲ್ಲಿಯೂ ಪ್ರಚಾರ ಆಗಲಿ. ಶ್ರಮಪಟ್ಟರೆ ಫಲವು ಅವಶ್ಯವಾಗಿ ದೊರೆಯುವುದು. ರಾಜಾಸ್ಥಾನದ ಕ್ರಮಸಂಖ್ಯೆಯು ಮಹತ್ಕಾರ್ಯ ಮಾಡುವವರ ಪಟ್ಟಿಯಲ್ಲಿ ಬರುವ ದಿನವು ಹತ್ತಿರವಾಗಿದೆ. ಆದರೆ ಅದರ ಸಲುವಾಗಿ ಪರೋಪಕಾರಿ ಅಗಬೇಕಷ್ಟೆ. ಪರೋಪಕಾರಿಯಿಂದ ವಿಶ್ವ ಉಪಕಾರಿ ಆಗಿಬಿಡುವಿರಿ. ಬಾಪ್‌ದಾದಾರವರ ವಿಶೇಷ ಧರಣಿಯಮೇಲೆ ತಂದೆಯ ದೃಷ್ಟಿಯು ಬಿದ್ದಿರುವುದರಿಂದ ಅದು ಫಲವನ್ನು ಅವಶ್ಯವಾಗಿ ಕೊಡುವುದು. ರಾಜಾಸ್ಥಾನದ ಭೂಮಿಯು ತಂದೆಗೆ ಗೊತ್ತಿದೆ. ಆದರೆ ಸ್ವಯಂ ರಾಜಾಸ್ಥಾನದಲ್ಲಿರುವವರಿಗೆ ಕಡಿಮೆ ಗೊತ್ತಿದೆ, ಏನು ಆಗಲಿದೆ ಎನ್ನುವುದು ತಂದೆಗೆ ಗೊತ್ತಿದೆ. ಆದನಂತರ ತಿಳಿಸಿರಿ. ಪ್ರಮುಖ ಕೇಂದ್ರವೂ ಸಹ ರಾಜಾಸ್ಥಾನದಲ್ಲಿ ಇದೆಯಲ್ಲವೇ. ಆದ್ದರಿಂದ ಸುತ್ತಮುತ್ತಲಿನ ಸ್ಥಳಗಳೂ ಸಹ ಅವಶ್ಯವಾಗಿ ಆಕರ್ಷಣೆಯ ಕೇಂದ್ರಗಳಾಗುವುವು. ಆ ಸಮಯವೂ ಸಹ ಬರುವುದು. ಸಾಕಾರ ತಂದೆಯ ಮೊದಲನೆಯ ದೃಷ್ಟಿಯು ಎಲ್ಲಿಗೆ ಹೋಯಿತು? ರಾಜಾಸ್ಥಾನದ ಮೇಲೆ ಅಲ್ಲವೇ. ಆದ್ದರಿಂದ ಏನೋ ವಿಶೇಷತೆ ಇರಲೇಬೇಕು. ಆ ಸಮಯವು ಬಂದಾಗ ಪರದೆಯು ಸರಿಯುತ್ತದೆ ಹಾಗೂ ದೃಶ್ಯವು ನಿಮ್ಮ ಎದುರಿನಲ್ಲಿ ಬರುತ್ತದೆ, ಒಳ್ಳೆಯದು.

**ಶಿಕ್ಷಕರು (ಮಧ್ಯಪ್ರದೇಶದವರು)**: ಶಿಕ್ಷಕರ ವಿಶೇಷ ಕರ್ತವ್ಯವೇ ತಂದೆಯ ನೆನಪು ಹಾಗೂ ಸೇವೆ ಆಗಿದೆ. ಎಲ್ಲಾ ಶಿಕ್ಷಕರೂ ತುಂಬಾ ಧೈರ್ಯವನ್ನು ತೋರಿಸಿದ್ದೀರಿ. ಚೆನ್ನಾಗಿ ಪರಿಶ್ರಮಿಸುತ್ತಲೂ ಇದ್ದೀರಿ. ಮತ್ತೆ ಶ್ರಮದ ಫಲವೂ ಸಹ ದಿನಕಳೆದಂತೆ ಫಲೀಭೂತ ಆಗುತ್ತಾ ಹೋಗುವುದು. ಫಲ ಬಿಡುವುದು ಹಾಗೂ ವೃದ್ಧಿ ಆಗುತ್ತಾ ಹೋಗುವುದು ಮಧ್ಯಪ್ರದೇಶಕ್ಕೆ ದೊರೆತಿರುವ ವರದಾನ ಆಗಿದೆ. ಏಕೆಂದರೆ ಏಕಮತ ಹಾಗೂ ಏಕರಸ ಅವಸ್ಥೆಯಲ್ಲಿ ಇರುತ್ತಾ ಒಂದೇ ಕಾರ್ಯದಲ್ಲಿ ತೊಡಗುವ ಆತ್ಮರು ಸ್ವಯಂ ತಾವೂ ಸಹ ಸದಾ ಪ್ರಫುಲ್ಲಿತರಾಗಿರುತ್ತಾರೆ ಹಾಗೂ ಧರಣಿಯನ್ನೂ ಸಹ ಫಲದಾಯಕವನ್ನಾಗಿ ಮಾಡುತ್ತಾರೆ. ಹೇಗೆ ಈಗಿನ ಕಾಲದಲ್ಲಿ ವಿಜ್ಞಾನದ ಮೂಲಕ ಈಗತಾನೇ ಬೀಜವನ್ನು ಬಿತ್ತಿದರೆ ಈಗಲೇ ಫಲವು ದೊರೆಯುತ್ತದೆ. ಮೊದಲಿನಿಂದಲೇ ತೀವ್ರಗತಿ ಇರುವುದರಿಂದ ಹತ್ತಿದ ಬೀಜಕ್ಕೆ ಫಲವು ಪ್ರಾಪ್ತಿ ಆಗಿಬಿಡುತ್ತದೆ. ಹಾಗೆಯೇ ನಿಮ್ಮ ಜ್ಞಾನ ಶಕ್ತಿಯಿಂದ ಸಹಜ ಹಾಗು ತೀವ್ರಗತಿಯಿಂದ ಊರ್ಧ್ವಲಂಘನ(ಹೈಜಂಪ್) ಮಾಡುವವರಾಗಿದ್ದೀರಲ್ಲವೇ. ಕಲ್ಲನ್ನು ಒಡೆಯುವವರು ಆಗಿಲ್ಲ ತಾನೇ ಹೇಗೆ ನಿಮಿತ್ತ ಆತ್ಮರು ಇರುತ್ತಾರೋ ಹಾಗೆಯೇ ವಾಯುಮಂಡಲವೂ ಸಹ ರೂಪುಗೊಳ್ಳುತ್ತದೆ. ಸ್ವಯಂ ಸಹಜಯೋಗಿ ಆಗಿದ್ದರೆ ಮುಂಬರುವ ಆತ್ಮರನ್ನೂ ಸಹ ಸಹಜಯೋಗಿಯನ್ನಾಗಿ

ಮಾಡಿಬಿಡುತ್ತಾರೆ. ಸ್ವಯಂ ತೊಡಗಿನಲ್ಲಿ ಸಿಕ್ಕಿಬಿದ್ದರೆ ಬರುವ ಆತ್ಮರಲ್ಲಿಯೂ ಸಹ ಅದೇ ಸ್ಪಂದನಗಳು ಹರಡುತ್ತವೆ . ಆದ್ದರಿಂದ ನಿಮಿತ್ತ ಆತ್ಮರು ಸದಾ ನಿರ್ವಿಘ್ನ ಒಬ್ಬ ತಂದೆಯ ಸಂಬಂಧದಲ್ಲಿ ಮಗ್ನರಾಗಿರುವವರು ಇದೇ ಸ್ಥಿತಿಯಲ್ಲಿ ಇರಬೇಕು ಒಳ್ಳೆಯದು.

ಪ್ರಶ್ನೆ: ಯಾವ ಧಾರಣೆಯ ಆಧಾರದಿಂದ ಸದಾ ಸುಖದಸಾಗರದಲ್ಲಿ ಮುಳುಗಿರುವಿರಿ?

ಉತ್ತರ: ಅಂತರ್‌ಮುಖರಾಗಿರಿ, ಅಂತರ್ ಮುಖಿಗಳು ಸದಾ ಸುಖದಿಂದಿರುವಿರಿ. ಇಂದೋರ್ ನಿವಾಸಿಗಳು ಎಂದರೆ ಸದಾ ಅಂತರ್ಮುಖಿಗಳು ಹಾಗೂ ಸದಾ ಸುಖದಿಂದಿರುವವರು. ತಂದೆಯು ಸುಖದಸಾಗರ ಆಗಿರುವುದರಿಂದ ಮಕ್ಕಳೂ ಸಹ ಸುಖದ ಸಾಗರದಲ್ಲಿ ಲವಲೀನ ಆಗಿರುವರು. ಸುಖದಾತನ ಮಕ್ಕಳು ಸ್ವಯಂ ತಾವೂ ಸಹ ಮಾಸ್ಟರ್ ಸುಖದಾತಾ ಆಗುತ್ತೀರಿ. ಹಲವು ಆತ್ಮರಿಗೆ ಸುಖದ ಖಜಾನೆಯನ್ನು ಹಂಚುವವರು ಆಗುತ್ತೀರಿ. ಯಾರೇ ಬರಲಿ ಯಾವ ಭಾವನೆಯಿಂದಲೇ ಬರಲಿ ಆ ಭಾವನೆಯನ್ನು ನಿಮ್ಮಿಂದ ಸಂಪನ್ನ ಮಾಡಿಕೊಂದು ಹೋಗಬೇಕು. ಅಂತಹ ಸರ್ವಸಂಪನ್ನ ಮೂರ್ತಿಗಳಾಗಿರಿ. ಹೇಗೆ ತಂದೆಯ ಖಜಾನೆಯಲ್ಲಿ ಪ್ರಾಪ್ತಿಯಾಗದ ಯಾವ ವಸ್ತುವೂ ಇಲ್ಲವೋ ಹಾಗೆಯೇ ಮಕ್ಕಳೂ ಸಹ ತಂದೆಯ ಸಮಾನ ತೃಪ್ತ ಆತ್ಮ ಆಗುವಿರಿ.

ಪ್ರಶ್ನೆ: ಸ್ಥಿರವಾದ ನಶೆಯಲ್ಲಿರುವವರ ಲಕ್ಷಣವು ಏನಾಗಿರುತ್ತದೆ?

ಉತ್ತರ: ಸ್ಥಿರವಾದ ನಶೆಯಲ್ಲಿ ಯಾರು ಇರಬಲ್ಲರು ಎಂದರೆ ಬಾಪ್‌ದಾದಾರವರ ಹೃದಯ ಸಿಂಹಾಸನಕ್ಕೆ ಅಧಿಕಾರಿಗಳಾಗಿರುವವರು. ಸಂಗಮಯುಗದ ಶ್ರೇಷ್ಠ ಆತ್ಮರ ಸ್ಥಾನವೇ ತಂದೆಯ ಹೃದಯ ಸಿಂಹಾಸನ ಆಗಿದೆ. ಅಂತಹ ಸಿಂಹಾಸನವು ಇಡೀ ಕಲ್ಪದಲ್ಲಿ ಬೇರೆಯವಾಗಲೂ ದೊರೆಯಲಾರದು. ವಿಶ್ವದ ರಾಜ್ಯದ ಅಥವಾ ಪ್ರಾಂತೀಯ ರಾಜ್ಯದ ಸಿಂಹಾಸನವಂತೂ ದೊರೆಯುತ್ತಾ ಇರುವುದು. ಆದರೆ ಇಂತಹ ಸಿಂಹಾಸನವು ಮತ್ತೆ ದೊರೆಯುವುದಿಲ್ಲ. ಈ ಸಿಂಹಾಸನವು ಎಷ್ಟು ವಿಶಾಲವಾಗಿದೆ ಎಂದರೆ ನಡೆದಾಡುವುದು, ತಿರುಗಾಡುವುದು. ಊಟಮಾಡುವುದು, ನಿದ್ರಿಸುವುದು, ಏನೇ ಮಾಡಿದರೂ ಸದಾ ಸಿಂಹಾಸನಾ ಧಿಕಾರಿ ಆಗಬೇಕು. ಯಾರು ಸಿಂಹಾಸನಾರೂಢ ಮಕ್ಕಳಾಗಿದ್ದೀರೋ ಅವರು ಹಳೆಯ ದೇಹ ಅಥವಾ ಹಳೆಯ ಪ್ರಪಂಚದಿಂದ ವಿಸ್ಮೃತರಾಗಿರುತ್ತಾರೆ. ನೋಡುತ್ತೀದ್ದರೂ ಸಹ ನೋಡುವುದಿಲ್ಲ. ಒಳ್ಳೆಯದು.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 19-12-1978.

***ಸತ್ಯತೆಯೇ (ರಿಯಾಲಿಟಿ) ಎಲ್ಲದಕ್ಕಿಂತ ದೊಡ್ಡ ರಾಯಲ್ಟಿ (ಘನತೆ) ಯಾಗಿದೆ.***

ಸತ್ಯತೆ(ರಿಯಾಲಿಟಿ) ಎಂಬ ಘನತೆ (ರಾಯಲ್ಟಿ) ಇರಬೇಕು. ಸ್ವರೂಪದಲ್ಲಿ ಸತ್ಯತೆ ಇದ್ದಾಗ ಎಲ್ಲರ ಮುಖದಿಂದ ಇವರು ಈ ಪ್ರಪಂಚದವರಲ್ಲ ಅಲೌಕಿಕ ಪ್ರಪಂಚದ ಫರಿಶ್ತಾಗಳು ಅಥವಾ ಸ್ವರ್ಗದಿಂದ ದೇವತೆ ಬಂದಿದ್ದಾರೆ ಎಂಬ ಮಾತು ಬರುತ್ತದೆ. ಸ್ಮೃತಿಯಲ್ಲಿ ಸತ್ಯತೆ ಇದ್ದಾಗ ಕರ್ಮದಲ್ಲಿ ಅಥವಾ ಮಾತಿನಲ್ಲಿ ಘನತೆ (ರಾಯಲ್ಟಿ) ಕಂಡುಬರುತ್ತದೆ. ಇಂತಹ ಘನತೆ ಇರುವವರು ಸರ್ವ ಕರ್ಮೇಂದ್ರಿಯಗಳಿಂದ ಯಾವುದೋ ಒಂದು ಪ್ರಾಪ್ತಿಯನ್ನು ಕೊಡುವವರಾಗಿ ಅರ್ಥಾತ್ ದಾತರಾಗಿ ಇರುತ್ತಾರೆ. ಎಂದು ಹೇಳುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ನನ್ನ ನಿಜವಾದ ಸ್ವರೂಪವನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡಿರುವ ಸತ್ಯತೆಯ ಸ್ವರೂಪ.

2. ನಾನು "ಒಬ್ಬ ತಂದೆಯ ಹೊರತು ಬೇರೆ ಯಾರೂ ಇಲ್ಲ" ಎಂಬ ಸ್ಮೃತಿಯಿಂದ ಸ್ಥಿತಿಯಲ್ಲಿ ಸತ್ಯತೆಯನ್ನು ಧಾರಣೆ ಮಾಡಿದ್ದೇನೆ.

3. ನಾನು ಪ್ರತಿಯೊಂದು ಕರ್ಮದಲ್ಲಿ, ಮಾತಿನಲ್ಲಿ ಸತ್ಯತೆಯ ಘನತೆ(ರಾಯಲ್ಟಿ) ಇರುವ ಸತ್ಯವಚನ ಮಹಾರಾಜನು.

4. ನಾನು ಒಂದು ಕ್ಷಣದಲ್ಲಿ ಸ್ಥೂಲವತನ, ಸಂಗಮಯುಗದ ಸುಖ, ಸೂಕ್ಷ್ಮ ಫರಿಶ್ತಾಸ್ವರೂಪದ, ಪರಂಧಾಮ ನಿವಾಸಿ ಸ್ವರೂಪ, ಸ್ವರ್ಗದ ಸುಖಮಯ ಜೀವನದ ಅನುಭೂತಿ, ನಾಲ್ಕು ಧಾಮಗಳ ಅನುಭವ ಅರ್ಥಾತ್ ಜಾದು ಮಂತ್ರದ ಅನುಭವ ಮಾಡಿಸುವ ದಿವ್ಯದೃಷ್ಟಿ ಸ್ವರೂಪ.

5. ನಾನು ಸದಾ ಸರ್ವಕರ್ಮೇಂದ್ರಿಯಗಳಿಂದ ಸರ್ವಪ್ರಾಪ್ತಿಗಳನ್ನು ಕೊಡುವ ದೇವತೆ.

6. ನಾನು ಪ್ರತಿಯೊಂದು ಗುಣವನ್ನು, ಶಕ್ತಿಯನ್ನು, ಅತೀಂದ್ರಿಯ ಸುಖವನ್ನು, ಪ್ರಾಪ್ತಿಯನ್ನು ಪೂರ್ಣ ಪ್ರತಿಶತ ಅನುಭವ ಮಾಡಿಕೊಂಡು, 16 ಕಲಾ ಸಂಪೂರ್ಣವಾಗಿ ಭವಿಷ್ಯದಲ್ಲಿ ಸತೋಪ್ರಧಾನ ರಾಜ್ಯ ಮತ್ತು ಪ್ರಕೃತಿಯ ಸುಖವನ್ನು ಪಡೆದಿದ್ದೇನೆ.